## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1131/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಜಗದೀಶ್ | CW: 2 | PW: 2 |
| ತಂದೆಯ ಹೆಸರು | : | ಚಂದ್ರಪ್ಪ. ಹೆಚ್ | | |
| ವಯಸ್ಸು | : | 60 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಚೀಲೂರು | | |

ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1 ನನ್ನ ಹೆಂಡತಿ. ಚಾಸಾ 3 ಮತ್ತು 4 ರವರು ಗೊತ್ತು. ದಿಃ 13.11.2019 ರಂದು ಬೆಳಗ್ಗೆ 10.30 ರ ಸಮಯದಲ್ಲಿ ನಮ್ಮ ತಂದೆಯವರು ನಮಗೆ ಕೊಟ್ಟಿದ್ದಂತಹ ಬಸ್ ನಿಲ್ದಾಣದ ಹತ್ತಿರ ಹಳೇ ಗೋಡೆ ಇದ್ದು ಅದನ್ನು ರಿಪೇರಿ ಮಾಡಿಸಿ ಪಕ್ಕದಲ್ಲಿ ಕೋಣೆಗೆ ಗೋಡೆ ಕಟ್ಟುತ್ತಿದ್ದಾಗ ನಾನು ಚಾಸಾ 1 ರವರನ್ನು ಸ್ಥಳದಲ್ಲಿ ಬಿಟ್ಟು ಆಚೇ ಹೋಗಿದ್ದಾಗ ಆರೋಪಿಗಳು ಚಾಸಾ 1 ರವರ ಮೇಲೆ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆ. ನನಗೆ ಗಲಾಟೆ ವಿಚಾರ ಬೇರೆಯವರು ಹೇಳಿದಾಗ ಸ್ಥಳಕ್ಕೆ ಹೋಗಿ ನೋಡಲಾಗಿ ಗಲಾಟೆ ಮುಗಿದಿದ್ದು, ಚಾಸಾ 1 ರವರು ಸುಸ್ತಾಗಿದ್ದರಿಂದ ಚಾಸಾ 1 ರವರನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ-

ಆರೋಪಿ 1 ಮತ್ತು 2 ರವರು ನನಗೆ ಏನಾಗಬೇಕು ಎಂದರೆ ನನ್ನ ತಮ್ಮಂದಿರು. 3 ನೇ ಆರೋಪಿಯು 1 ನೇ ಆರೋಪಿಯ ಹೆಂಡತಿ ಹಾಗೂ 4 ನೇ ಆರೋಪಿಯು 2 ನೇ ಆರೋಪಿಯ ಹೆಂಡತಿ ಎಂದರೆ ಸರಿ. ಗಲಾಟೆಯಾದ ಸ್ಥಳ ಯಾವುದು ಎಂದರೆ ಸಾಕ್ಷಿಯು ನಮ್ಮ ತಂದೆಯವರು ನನಗೆ ನೀಡಿದ್ದಂತಹ ಚೀಲೂರು ಬಸ್ ನಿಲ್ದಾಣದ ಹತ್ತಿರ ಇರುವ ಸರ್ವೆ ನಂ.83 ರಲ್ಲಿ ಎಂದು ನುಡಿಯುತ್ತಾರೆ. ನಾನು ಗಲಾಟೆಯನ್ನು ಕಣ್ಣಾರೆ ನೋಡಿಲ್ಲದ ಕಾರಣ ಹಲ್ಲೆ ವಿಚಾರಗಳು ನನಗೆ ಖುದ್ದು ಗೊತ್ತಿಲ್ಲ ಎಂದರೆ ನಾನು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.83 ಯಾರ ಹೆಸರಿನಲ್ಲಿರುತ್ತದೆ ಎಂದರೆ ನನ್ನ ತಂದೆಯ ಹೆಸರಿನಲ್ಲಿ ಎಂದು ನುಡಿಯುತ್ತಾರೆ. ಸರ್ವೆ ನಂ.83 ರ ದಾಖಲೆಯನ್ನು ನಾನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿ. ಆರೋಪಿಗಳು ಚಾಸಾ 1 ರವರ ಮೇಲೆ ಯಾವುದೇ ಗಲಾಟೆ ಹಲ್ಲೆ ಮಾಡಿಲ್ಲದೇ ಇದ್ದರೂ ಸಹ ನಮ್ಮ ಮತ್ತು ಆರೋಪಿಗಳ ನಡುವೆ ಇರುವ ಸಿವಿಲ್ ದಾವೆಗೆ ನಮಗೆ ಅನುಕೂಲವಾಗಲೀ ಎಂದು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರವರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.